# ನೀರಿನೊಳಗಿನ ಮಂಜು

■ ಡಾ. ನಾ. ಮೊಗಸಾಲೆ
ಕಲೆ: ಮನೋಹರ ಕೆ. ಆಚಾರ್ಯ



## ಮತ್ತೆ ಮಳೆ ಹುಯ್ಯುತಿದೆ... ಎಲ್ಲ ನೆನಪಾಗುತಿದೆ...

ಇದಾಗಿ ಸುಮಾರು ಒಂದು ತಿಂಗಳು ದಾಟಿರಬಹುದು. ಮುಟ್ಟು ಎಂಬ ಕಾರಣದಿಂದ ಗೋವಿಂದ ಭಟ್ಟರ ಮನೆಯ ಕೆಲಸಕ್ಕೆ ಹೋಗದಿರುವ ಸೌಮ್ಯ ಆ ದಿನ ಭಟ್ಟರ ಮನೆಗೆ ಹೋಗದೇ ಮನೆಯಲ್ಲೇ ಉಳಿದಳು. ಸುಮ್ಮನೆ ಮನೆಯಲ್ಲಿ ಕೂಡುವುದಕ್ಕಿಂತ ಹಟ್ಟಿಯ ದನದ ಹೊಟ್ಟೆಯಾದರೂ ತುಂಬಿಸಬಹುದು ಎಂಬಂತೆ ತನ್ನ ಮನೆಯ ಹಿಂಬದಿಯಲ್ಲಿರುವ ಸಂಕಪ್ಪ ಶೆಟ್ಟರ ಗದ್ದೆಯ ಬದುವಿನಲ್ಲಿ ಹುಲ್ಲು ಹೆರೆಯಲು ತೊಡಗಿದಳು. ಅದೇ ಹೊತ್ತಿಗೆ ಪಕ್ಕದ ಗದ್ದೆಯಲ್ಲಿ ಉಳುಮೆಯಲ್ಲಿದ್ದ ದಲಿತ ಪರ್ದೇಶಿ, 'ನೀವು ಯಾಕಮ್ಮ ಹುಲ್ಲು ಹೆರೆಯುತ್ತೀರಿ? ಉಳುಮೆ ಮುಗಿದ ಮೇಲೆ ನಾನೇ ಹುಲ್ಲು ಹೆರೆದು ನಿಮಗೆ ತಂದೊಪ್ಪಿಸುತ್ತೇನೆ' ಎಂದ. ಸೌಮ್ಯ 'ಬೇಡ' ಎನ್ನುತ್ತಲೇ ಆ ಕೆಲಸವನ್ನು ಮುಂದುವರಿಸಿದಳು. ಅವಳಿಗೆ ಯಾಕೋ ಆ ದಲಿತನ ಮೇಲೆ ತುಂಬಾ ಪ್ರೀತಿ ಇತ್ತು. ತನ್ನ ಮನೆ ಬಾಗಿಲಲ್ಲಿ ಆತ ಹಾದು ಹೋಗುತ್ತಿರುವುದು ಕಂಡರೆ ಆಕೆ ಆತನನ್ನು ಕರೆದು ಎಷ್ಟೋ ಬಾರಿ ತಿಂಡಿತೀರ್ಥ ನೀಡಿದ್ದುಂಟು. ಪರ್ದೇಶಿಯೂ ಅಷ್ಟೇ. ಸೌಮ್ಯಳ ಮನೆಗೆ ಬೇಕಾದ ಕಟ್ಟಿಗೆ ಒಡೆಯುವುದಕ್ಕೆ ಸದಾ ಸಿದ್ಧನಿದ್ದ. ಬೇಸಿಗೆಯಲ್ಲಿ ಆಕೆಯ ಮನೆಯ ಸೂರಿಗೆ ಅಡಿಕೆ ಸೋಗೆಗಳನ್ನು ತಂದು ಹೊದೆಸುತ್ತಿದ್ದ. ಆತ ಅಸ್ಪೃಶ್ಯ ಎಂಬ ಕಾರಣದಿಂದ ಇಡೀ ಊರು ಅವನಿಗೆ ಯಾವುದೇ ಪಾನೀಯವನ್ನು ತೆಂಗಿನಕಾಯಿಯ ಗೆರಟೆಯಲ್ಲಿ ನೀಡುತ್ತಿದ್ದರೆ, ಸೌಮ್ಯ ಅವನೂ ಮನುಷ್ಯನಲ್ಲವೇ ಎಂಬಂತೆ ತಾನು ಉಪಯೋಗಿಸುವ ಕಂಚಿನ ಪಾತ್ರೆಯಲ್ಲೇ ಪಾನೀಯ ನೀಡುತ್ತಿದ್ದಳು. ಪರ್ದೇಶಿ ಮಾತ್ರ ಇದಕ್ಕೆ ಮೊದಮೊದಲು ಒಪ್ಪದೇ ಇದ್ದರೂ ಆಮೇಲೆ ಸೌಮ್ಯಳ ಒತ್ತಾಯಕ್ಕೆ ಒಪ್ಪಿಕೊಂಡಿದ್ದ.

ಸೌಮ್ಯ ಮತ್ತು ಪರ್ದೇಶಿಯಲ್ಲಿ ಈ ಮಾತುಕತೆ ನಡೆಯುವ ಹೊತ್ತಿಗೆ ಪೇಟೆಗೆ ಹೊರಟಿದ್ದ ಕುಪ್ಪಣ್ಣ ಭಟ್ಟ ಸೌಮ್ಯಳ ಮನೆಯ ಇದಿರಲ್ಲಿ ನಿಂತು ಆಕೆ ಅಲ್ಲೆಲ್ಲಾದರೂ ಕಾಣಿಸುತ್ತಾಳೋ ಎಂದು ನೋಡುತ್ತಿದ್ದ. ಸೌಮ್ಯ ಅಲ್ಲಿ ಕಾಣಿಸುತ್ತಿಲ್ಲ ಎಂದು ಆತ ಮುಂದೆ ಹೆಜ್ಜೆ ಹಾಕತೊಡಗಿದಾಗ ದೂರದ ಗದ್ದೆಯಂಚಿನಲ್ಲಿ ಸೌಮ್ಯ ಹುಲ್ಲು ಹೆರೆಯುವುದು ಅವನಿಗೆ ಕಂಡಿತು. ಆತ ತಕ್ಷಣ, 'ಅರೆ ಇಷ್ಟು ಸಲೀಸಾಗಿ ಇವಳು ಯಾವತ್ತೂ ನನಗೆ ಸಿಗುವುದು ಕಷ್ಟ' ಎಂದುಕೊಂಡು ಖುಷಿಪಟ್ಟ. ಪಕ್ಕದ ಗದ್ದೆಯಲ್ಲಿ ತನಗೆ ಪರಿಚಯ ಇರುವ ಪರ್ದೇಶಿ ಗದ್ದೆ ಉಳುತ್ತಿದ್ದರೂ ಅವನೇನು ಮಾಡುತ್ತಾನೆ?' ಎಂದುಕೊಂಡು ನಿಧಾನವಾಗಿ ಅವಳ ಬಳಿ ಸಾರಿ, 'ಇವೊತ್ತು ಗೋವಿಂದ ಭಟ್ಟರಲ್ಲಿಗೆ ಕೆಲಸಕ್ಕೆ ಹೋಗಲಿಲ್ಲವೇ?' ಎಂದು ಸೌಮ್ಯಳನ್ನು ಮಾತಿಗೆ ಎಳೆದ.

ಸೌಮ್ಯ ತಲೆ ಎತ್ತಿ ನೋಡಿದಳು. ಇದಿರಿಗೆ ಬ್ರಹ್ಮರಾಕ್ಷಸನಂಥ ಕುಪ್ಪಣ್ಣ ಭಟ್ಟ ನಿಂತಿದ್ದಾನೆ! ಅವಳಿಗೆ ದಿಗಿಲಾಯಿತು. ಈ ಪ್ರಾಣಿ ಈಗ ಏನಾದರೂ ಮಂತ್ರ ಮಾಟ ಮಾಡಿದರೆ ದೇವರೇ ಗತಿ ಎಂದುಕೊಂಡ ಆಕೆ ಮೆತ್ತಗೆ ಭಟ್ಟನನ್ನು ದೂರ ಸಾಗಹಾಕಲು, 'ಹೌದು ಹೋಗಲಿಲ್ಲ' ಎಂದಳು.

ಕುಪ್ಪಣ್ಣ ಭಟ್ಟ 'ಹೌದಾ?' ಒಳ್ಳೆದಾಯಿತು ಬಿಡು' ಎಂದವನೇ 'ನೀನು ಹ್ಞೂ ಅಂದರೆ ಸಂಜೆ ಪೇಟೆಯಿಂದ ಬರುವಾಗ ನಾನು ಬೇಕೆಂತಲೇ ತಡಮಾಡಿ ಬರುತ್ತೇನೆ. ನಿನ್ನಮ್ಮನಿಗೆ ಕಿವಿ ಕೇಳುವುದಿಲ್ಲ, ಕಣ್ಣು ಕಾಣುವುದಿಲ್ಲ ಎಂದು ನನಗೆ ಗೊತ್ತು. ನಿನ್ನಂಥ ಚೆಂದುಳ್ಳಿ ಚೆಲುವೆಯನ್ನು ನೋಡುವಾಗ ನನ್ನಂಥವರು ಸುಮ್ಮನಿರಲಿಕ್ಕೆ ಆಗುತ್ತದೆಯೇ?' ಎಂದು ಹಲ್ಲುಗಿಂಜಿದ. ಆ ಮಾತನ್ನು ಕೇಳಿಸಿಕೊಳ್ಳಲಾಗದ ಸೌಮ್ಯ ತನ್ನ ಎರಡೂ ಕಿವಿಗಳನ್ನು ಮುಚ್ಚಿಕೊಂಡು, 'ನೀವು ಎಂಥ ಮಾತನಾಡುತ್ತೀರಿ ಭಟ್ಟರೇ? ನಾಚಿಕೆಯಾಗುವುದಿಲ್ಲವೇ ನಿಮಗೆ?' ಎನ್ನುತ್ತಾ 'ಥೂ' ಎಂದು ಉಗುಳಿದಳು. ಆಮೇಲೆ, 'ನೀವು ಇಂಥ ಮಾತನಾಡಿದರೆ ನಾನೀಗ ಬೊಬ್ಬೆ ಹೊಡೆಯುತ್ತೇನೆ. ಆ ಪರ್ದೇಶಿ ಇಲ್ಲಿಗೆ ಓಡಿ ಬರುತ್ತಾನೆ.' ಎನ್ನುತ್ತಾ ಎದ್ದು ನಿಂತು, 'ದಯಮಾಡಿ ಹೋಗಿ' ಎಂದು ಕೈ ಮುಗಿದಳು.

ಕುಪ್ಪಣ್ಣ ಭಟ್ಟನಿಗೆ ಸಿಟ್ಟು ಬಂತು. 'ನೀನು ಬೊಬ್ಬೆ ಹೊಡೆಯುವ ಮೊದಲೇ ನಾನೇನು ಮಾಡುತ್ತೇನೆ ಗೊತ್ತಾ?' ಎಂದವನೇ, ಎಡದ ಕಾಲಿನ ಬೆರಳುಗಳಲ್ಲಿ ಒಂದು ಸಣ್ಣ ಕಲ್ಲನ್ನು ಎತ್ತಿ ಬಲದ ಕೈಯ ಬೆರಳುಗಳ